ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

ಸಮಗ್ರ ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-೬೫

ಮಾಯಸಂದ್ರ ಹೋಬಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **30.07.2013**

ಈ ವಾರದ ಮುನ್ಸೂಚನೆ (ದಿನಾಂಕ 31-07-13 to 04.08.13 ವರೆಗೆ)

ನಿಯತಾಂಕಗಳು	31.07.13	01.08.13	02.08.13	03.08.13	04.08.13
ಮಳೆ (ಮಿ ಮಿ)	2	3	5	6	6
ಗರಿಷ್ಠ ಉಷ್ಣಾಂಶ(ಡಿ.ಸೆ.)	27	28	27	28	27
ಕನಿಷ್ಠ ಉಷ್ಣಾಂಶ (ಡಿ.ಸೆ.)	20	21	20	20	20
ಮೋಡ (ಪ್ರಮಾಣ)	8	8	8	6	5
ಅರ್ದ್ರತೆ ೭.೨೦ ಬೆ (ಶೇ)	84	85	85	86	84
ಅರ್ದ್ರತೆ ೨.೨೦ ಮ (ಶೇ)	71	72	74	74	75
ಗಾಳಿಯ ವೇಗ (ಕಿ.ಮಿ/ಗಂಟೆಗೆ)	6	7	8	8	7
ಗಾಳಿಯ ದಿಕ್ಕು (ಡಿಗ್ರಿ)	250	250	250	250	260

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ಎಲ್ಲಾ ಐದು ದಿನಗಳಲ್ಲೂ ಭಾಗಶಃ ಮೋಡ ಮಳೆಯಾಗುವ ಸಾಧ್ಯತೆಯಿದ್ದು, ಹಗುರದಿಂದ ಸಾಧಾರಣವಾಗಿ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ **27.0-28.0°C** ಮತ್ತು ಕನಿಷ್ಠ **20-21°C** ಇರಲಿದೆ. ಬೆಳಿಗಿನ ಅರ್ದ್ರತೆ ಪ್ರಮಾಣ ಶೇ **89-93%** ಇದ್ದು, ಮಧ್ಯಾಹ್ನ **71-75 %** ಇರುವುದು ಮತ್ತು ಗಾಳಿಯು ನೈರುತ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ **7-8** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಸಾಮಾನ್ಯ ಸೂಚನೆಗಳು:

- ತೊಗರಿ ಅಥವಾ ಇನ್ನಿತರ ದ್ವಿದಳ ಧಾನ್ಯಗಳ ಬಿತ್ತನೆ ಮಾಡುವ ಮೊದಲು ರೈಜೋಬಿಯಂ ಜೀವಾಣುವಿನಿಂದ ಉಪಚರಿಸುವುದು ಸೂಕ್ತ.
- ಉಳುಮೆ ಹಾಗೂ ಬಿತ್ತನೆ ಮಾಡುವಾಗ ಇಳಜಾರಿಗೆ ಅಡ್ಡಲಾಗಿ ಸಾಲು ಹೊಡೆದು ಬಿತ್ತನೆ ಮಾಡುವುದರಿಂದ ಮಳೆ ನೀರು ಭೂಮಿಯಲ್ಲಿ ಚೆನ್ನಾಗಿ ಇಂಗುತ್ತದೆ.
- ಜಾನುವಾರುಗಳಿಗೆ ಕಾಲು ಬಾಯಿ ಜ್ವರದಿಂದ ತಪ್ಪಿಸಲು ಸರಿಯಾದ ಲಸಿಕೆ ಹಾಕಿಸುವುದು ಒಳ್ಳೆಯದು.
- **ಮುಸುಕಿನ ಜೋಳ, ತೊಗರಿ, ಶೇಂಗಾ, ಹಾಗೂ ರಾಗಿ** ಮುಂತಾದ ಬೆಳೆಗಳಲ್ಲಿ ಅಂತರ ಬೇಸಾಯ ಮಾಡಿ ಕಳೆಯನ್ನು ತೆಗೆಯಲು ಸೂಚಿಸಲಾಗಿದೆ
- ಗಾಳಿಯು ವೇಗದಿಂದ ಬೀಸುತ್ತಿರುವುದರಿಂದ, ತರಕಾರಿ ಬೆಳೆಗಳಿಗೆ ಸೂಕ್ತ ಆಸರೆ ಒದಗಿಸುವುದು ಅತ್ಯವಶ್ಯಕ
- ಮುಖ್ಯ ಬೆಳೆಗಳ ಸುತ್ತಲೂ ನೆಟ್ ಹಾಕುವುದರಿಂದ ಅನೇಕ ಕೀಟಗಳನ್ನು ತಡೆಯಬಹುದು
- ಬಸಿಗಾಲುವೆಗಳನ್ನು ಸ್ವಚ್ಚಮಾಡಬೇಕು ಮತ್ತು ಹೊಲಗಳಲ್ಲಿ ನೀರು ನಿಲ್ಲದಂತೆ ಸರಾಗವಾಗಿ ಹೋಗುವಂತೆ ನೋಡಿಕೊಳ್ಳಬೇಕು.
- ಸ್ವಲ್ಪಮಟ್ಟಿನ ನೀರಾವರಿ ಸೌಲಭ್ಯವಿದ್ದಲ್ಲಿ ಏರೋಬಿಕ್ ಅಥವಾ ಶ್ರೀ ವಿಧಾನದಲ್ಲಿ ಭತ್ತವನ್ನು ಬೆಳೆಯುವುದು. ಏರೋಬಿಕ್ ವಿಧಾನದಲ್ಲಿ ಭತ್ತ ಬೆಳೆಯಲು ಸೂಕ್ತ ತಳಿಗಳು: ಎಮ್.ಎ.ಎಸ್-೯೪೬-೧,
- ಗಾಳಿಯು ವೇಗದಿಂದ ಬೀಸುತ್ತಿರುವುದರಿಂದ, ತರಕಾರಿ ಬೆಳೆಗಳಿಗೆ ಸೂಕ್ತ ಆಸರೆ ಒದಗಿಸುವುದು ಅತ್ಯವಶ್ಯಕ.

ಪಾಪ್ ಕಾರ್ನ್: ಕಾಂಡ ಕೊರೆಯುವ ಹುಳು ಕಂಡುಬಂದರೆ:

ಕ್ಲೋರೊಪೈರಿಫ಼ಾಸ್ ಅನ್ನು ೧.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು ಸೂಕ್ತ.

- ಕಳೆದ ಕೆಲವು ದಿನಗಳಿಂದ ವಾತವರಣದಲ್ಲಿ ಗಾಳಿಯು ಹೆಚ್ಚಾಗಿದ್ದು, ಬಾಳೆ ಹಾಗು ಪರಂಗಿ ಗಿಡಗಳು ನೆಲಕ್ಕೆ ಉರುಳಿರುವುದು ಕಂಡು ಬಂದಿರುವುದರಿಂದ ಕವಡು (**wooden sticks**) ಗಳನ್ನು ಕೊಟ್ಟು ಗಿಡಗಳು ನೆಲಕ್ಕೆ ಬೀಳದಂತೆ ಎಚ್ಚರ ವಹಿಸಿ.

ಬೂಜು ರೋಗ (ಡೌನಿ) ಕಂಡುಬಂದಲ್ಲಿ ರಿಡೋಮಿಲ್ (೨ ಗ್ರಾಂ ಪ್ರತಿ ಲೀಟರ್ ನೀರಿಗೆ) ಸಿಂಪಡಿಸಿ.

ಬೂಜು ರೋಗ (ಡೌನಿ) ಕಂಡುಬಂದಲ್ಲಿ ರಿಡೋಮಿಲ್ (೨ ಗ್ರಾಂ ಪ್ರತಿ ಲೀಟರ್ ನೀರಿಗೆ) ಸಿಂಪಡಿಸಿ.

ನೋಡಲ್ ಅಧಿಕಾರಿ:

ಡಾ.ಎಮ್.ಬಿ. ರಾಜೇಗೌಡ

ಬೆಂಗಳೂರು

This document was created using Smart PDF creator. To remove this message purchase the product at www.SmartPDFCreator.com